ಒ.ಎಸ್. ನಂ.53/2020
ಪಿಡಬ್ಲು-1

ದಿನಾಂಕ 22-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

ಸದರಿ ದಾವೆಯನ್ನು ಸಲ್ಲಿಸಲು ನಾನೇ ವಕೀಲರ ಬಳಿ ಹೋಗಿರುತ್ತೇನೆ. ದಾವಾ ಆಸ್ತಿಯ ಬೆಲೆಯು ಅಂದಾಜು 4 ಲಕ್ಷ ಪ್ರತಿ ಎಕರೆಗೆ ಇರುತ್ತದೆ. 1993ರಲ್ಲಿ ಗುಂಡಪ್ಪ ತಂದೆ ಸಂಗಪ್ಪ ಇವರಿಗೆ ಮಾರಾಟ ಮಾಡಿದಾಗ ದಾವಾ ಆಸ್ತಿಯ ಬೆಲೆ ಎಷ್ಟು ಇತ್ತು ಎಂದರೆ ಸಾಕ್ಷಿಯು ನಾನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನೀಮಗೆ ಸರಕಾರ ಯಾವಾಗ ಮಂಜೂರು ಮಾಡಿದೆ ಎಂದರೆ ಸಾಕ್ಷಿಯು ನನ್ನ ತಂದೆಯವರಿಗೆ ಮಂಜೂರು ಮಾಡಿದೆ ಎಂದು ನುಡಿಯುತ್ತಾರೆ. ನನ್ನ ಜೋತೆ ಬಹಳಷ್ಟು ಜನರಿಗೆ ಸರಕಾರ ಅದೇ ದಿವಸ ಒಂದೇ ಸರ್ವೆ ನಂಬರಲ್ಲಿ ಜಮೀನುಗಳನ್ನು ಮಂಜೂರು ಮಾಡಿದೆ ಎಂದರೆ ಸರಿ.

ಹಣಮಂತ್ರಾಯ ತಂದೆ ಅಯ್ಯಾಳಪ್ಪ, ಯಲ್ಲಪ್ಪ ತಂದೆ ಅಯ್ಯಾಳಪ್ಪ , ಬಸ್ಸಪ್ಪ ತಂದೆ ಸಂಜಿವಪ್ಪ ಮತ್ತು ಸಿದ್ದಪ್ಪ ತಂದೆ ಸಂಜಿವಪ್ಪ ಇವರಿಗೆ ಒಂದೇ ದಿವಸ ಸರಕಾರ ಸರ್ವೆ ನಂಬರ 139ರಲ್ಲಿ ಜಮೀನುಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಯಲ್ಲಪ್ಪ ತಂದೆ ಅಯ್ಯಾಳಪ್ಪ ಮತ್ತು ಹಣಮಂತ್ರಾಯ ತಂದೆ ಅಯ್ಯಾಳಪ್ಪ ರವರು ತಮಗೆ ಮಂಜೂರಾದ ಜಮೀನನ್ನು ತಮ್ಮ ಹೆಸರಿಗೆ ಪಹಣಿಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸುಮಾರು 20 ವರ್ಷಗಳ ಹಿಂದೆ ನಾನು 1 ವರ್ಷ ಕಾಲ ಬೆಂಗಳೂರಿಗೆ ದುಡಿಯಲು ಹೋಗಿರುತ್ತೇನೆ. ಸದರಿ ಸಮಯದಲ್ಲಿ ನನ್ನ ತಮ್ಮ ಯಲ್ಲಪ್ಪ ತಂದೆ ಅಯ್ಯಾಳಪ್ಪ ಇವರಿಗೆ ನನ್ನ ಜಮೀನನ್ನು ಉಳುಮೇ ಮಾಡುತ್ತಿದ್ದರು ಎಂದರೆ ಸರಿ.

ನನ್ನ ತಮ್ಮ ಯಲ್ಲಪ್ಪ ತಂದೆ ಅಯ್ಯಾಳಪ್ಪ ನನ್ನ ಹೆಸರನ್ನು ಪಹಣಿಯಲ್ಲಿ ಸೇರಿಸುವಂತೆ ಕೇಳಿರುತ್ತಿಯ ಎಂದರೆ ಸಾಕ್ಷಿಯು ನನ್ನ ಬಳಿ ಹಣ ಇರಲ್ಲಿಲ್ಲ ಎಂದು ನುಡಿಯುತ್ತಾರೆ. ಯಲ್ಲಪ್ಪ ತಂದೆ ಅಯ್ಯಾಳಪ್ಪ ಮತ್ತು ಹಣಮಂತ್ರಾಯ ತಂದೆ ಅಯ್ಯಾಳಪ್ಪ ಇವರಿಗೆ ಬೇರೆ ಆಸ್ತಿ ಇದೆ ಎಂದರೆ ಸಾಕ್ಷಿಯು ಬೇರೆ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಯಲ್ಲಪ್ಪ ತಂದೆ ಅಯ್ಯಾಳಪ್ಪ ಮತ್ತು ಹಣಮಂತ್ರಾಯ ತಂದೆ ಅಯ್ಯಾಳಪ್ಪ ತಲಾ ಎರಡು ಎರಡು ಎಕರೆ ಜಮೀನುಗಳು ಇರುತ್ತವೆ ಎಂದರೆ ಸರಿ.

ನನ್ನ ಉಪಜೀವನ ಹೇಗೆ ನಡಿಯುತ್ತದೆ ಎಂದರೆ ನನ್ನ ಮಕ್ಕಳು ಬೆಂಗಳೂರಿಗೆ ದುಡಿಯಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮಾನ್ಯ ಉಚ್ಚನ್ಯಾಯಾಲಯಕ್ಕೆ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿ ಕೊಡುವಂತೆ ರಿಟ್ ಹೋಗಿರುತ್ತೇನೆ. ನಾನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಸಲ್ಲಿಸುವ ಮೊದಲು ತಹಸಿಲ್ದಾರರಿಗೆ ಅರ್ಜಿ ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿಯು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನಾಗಪ್ಪ ತಂದೆ ಮಹಾಲಿಂಗಪ್ಪ ಕಡಿಕೋಳ ಇವರ ಪರಿಚಯ ಇರುತ್ತದೆ. ಪ್ರತಿವಾದಿಗಳು ಸದರಿ ನಾಗಪ್ಪ ತಂದೆ ಮಾಹಾಲಿಂಗಪ್ಪ ಕಡಿಕೋಳ ಇವರ ವಿರುದ್ಧ ದಾವಾ ನಂಬರ 165/2014ನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾಗಪ್ಪ ತಂದೆ ಮಾಹಾಲಿಂಗಪ್ಪ ಕಡಿಕೋಳ ಇವರು ನನಗೆ ಹೇಳಿಕೆಯ ಮೇರೆಗೆ ನಾನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಗುಂಡಪ್ಪ ತಂದೆ ಸಂಗಪ್ಪ ಇವರು ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗುಂಡಪ್ಪ ತಂದೆ ಸಂಗಪ್ಪ ಜೀವಂತ ಇರುತ್ತಾರೆ ಎಂದರೆ ಸಾಕ್ಷಿಯು ಕುರಿಗಳನ್ನು ಮೈಸುತ್ತಾ ಬೇರೆ ಕಡೆ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯ ಬಗ್ಗೆ ಕಂದಾಯ ಅಧಿಕಾರಿಗಳು ಮೂರು ಸಲ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಪಂಚನಾಮೆಯಲ್ಲಿ ನಾನು ದಾವಾ ಆಸ್ತಿಯಲ್ಲಿ ನಾನು ಸ್ವಾ ಧಿನತೆ ಇಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಸ್ವಾ

ಧಿನತೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಪಂಚನಾಮೆಯನು ವಿರುದ್ಧ ಮಾನ್ಯ ಉಚ್ಚನ್ಯಾಯಾಲಯಕ್ಕೆ ರಿಟ್ ಸಲ್ಲಿಸಿದ್ದು, ಸದರಿ ರಿಟ್ ನಲ್ಲಿ ಸಹಾಯಕ ಆಯುಕ್ತರು ನಿರ್ಧಾರ ಮಾಡುತ್ತಾರೆ ಎಂದರೆ ಸರಿ.

ಸಹಾಯಕ ಆಯುಕ್ತರು ಕಛೇರಿಯಿಂದ ನೋಟಿಸು ಬಂದಿದ್ದು ನಾನು ಸದರಿ ಪ್ರಕರಣದಲ್ಲಿ ಹಾಜರಾಗಿ ತಕರಾರು ಸಹ ಸಲ್ಲಿಸಿರುತ್ತೇನೆ. ಸಹಾಯಕ ಆಯುಕ್ತರು ಕಛೇರಿಯಿಂದ ಬಂದ ನೋಟಿಸು ನನಗೆ ಆದ ಮಂಜೂರಾತಿ ರದ್ದು ಸಲುವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಹಾಯಕ ಆಯುಕ್ತರು ಕಛೇರಿಯಲ್ಲಿ ಇರುವ ಪ್ರಕರಣವು ಇನ್ನು ಚಾಲ್ತಿ ಹಂತದಲ್ಲಿ ಇರುತ್ತದೆ. ನನಗೆ ನೀಡಿದ ಸಾಗುವಳಿ ಚೀಟಿಯನ್ನು ಹಾಜರು ಪಡಿಸಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಯ ಆದೇಶ ನಂತರ ತಹಸಿಲ್ದಾರರು 2016ರಲ್ಲಿ ನನಗೆ ಸಾಗುವಳಿ ಚೀಟಿ ನೀಡಿರುತ್ತಾರೆ ಎಂದರೆ ಸರಿ.

ಸಾಗುವಳಿ ಚೀಟಿ ನೀಡಿದ ನಂತರ ತಹಸಿಲ್ದಾರರು ನಾನು ಕಬ್ಜೆ ಯಲ್ಲಿ ಇರುವುದಿಲ್ಲ ಎಂದು ಸಹಾಯಕ ಆಯುಕ್ತರು ಇವರಿಗೆ ವರದಿ ನೀಡಿರುತ್ತಾರೆ ಎಂದರೆ ಸರಿ. ಇನ್ನು ಎರಡು ರಿಟ್ ಅರ್ಜಿಯ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವಾಗಿದ್ದು ಸದರಿ ಆದೇಶದ ಪ್ರಕಾರ ನನಗೆ ಸಹಾಯಕ ಆಯುಕ್ತರು ಕಛೇರಿಯಲ್ಲಿ ಇರುವ ಪ್ರಕರಣಗಳಲ್ಲಿ ತಕರಾರು ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದರೆ ಸರಿಯಲ್ಲ. 1993 ರಿಂದ 2015ರ ವರೆಗೆ ದಾವಾ ಆಸ್ತಿಯು ಮಾರಾಟ ಮಾಡಿದ ಕಾರಣ ಪ್ರತಿವಾದಿಯರೆ ದಾವಾ ಆಸ್ತಿಯಲ್ಲಿ ಸ್ವಾ ಧಿನತೆ ಹೋಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ 1993 ರಿಂದ 2015 ರವರೆಗೆ ನನ್ನ ಹೆಸರು ದಾಖಲು ಮಾಡಲು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತವಾಗಿ ದಾವಾ ಆಸ್ತಿಯಲ್ಲಿ ಹತ್ತಿ ಬೆಳೆ ಇದ್ದು ಅದನ್ನು ಪ್ರತಿವಾದಿಯರೆ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ದಾವಾ ಆಸ್ತಿಯಲ್ಲಿ ನಾನೇ ಕಬ್ಜೆಯಲ್ಲಿ ಇರುವುದಾಗಿ ಯಾವುದೇ ದಾಖಲೇಗಳನ್ನು ಹಾಜರು ಪಡಿಸಿರುತ್ತಿರಿ ಎಂದರೆ ಸಾಕ್ಷಿಯು ಸಾಗುವಳಿ ಚೀಟಿಯನ್ನು ಹಾಜರು ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾಗಪ್ಪ ತಂದೆ ಮಾಹಾಲಿಂಗಪ್ಪ ಕಡಕೋಳರವರು ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ದೂರು ಆಗಿದ್ದು ಅದರ ಮೇಲೆ ಪೊಲೀಸರ ಯಾವುದೇ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ನ್ನು ನಾನೇ ಕಬ್ಜದಲ್ಲಿ ಇರುತ್ತೇನೆ ಎಂದು ತೋರಿಸಲು ಸುಳ್ಳು ಶೃಷ್ಟಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ